# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ನಗರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-232015,
ಮೊಬೈಲ್: 9448994845
ಫ್ಯಾಕ್ಸ್: 08232-233600
ಇ-ಮೇಲ್: aee_maddur@rediffmail.com


ಕ್ರಮಾಂಕ:ಸಕಾನಿಇಂ(ವಿ)/ಸಲೆಅ/ಕಾ&ಪಾ,ನಉವಿ/ಮದ್ದೂರು-1/2018-19/2078-84 ದಿನಾಂಕ: 6/8/18
ಲಗತ್ತು:

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಉಪವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ:30.07.2018 ರಂದು ಜರುಗಿದ ನಗರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ / ಸಿಬ್ಬಂದಿ | ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ಶ್ರೀನಿವಾಸ ಮೂರ್ತಿ | ಅ ಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 2 | ಶ್ರೀ ರವಿಶಂಕರ್ | ಕಾ ನಿ ಇಂ(ವಿ) | ಮದ್ದೂರು ವಿಭಾಗ |
| 3 | ಶ್ರೀ ಜಿ.ಯು.ಮಂಜುನಾಥ್ | ಸ ಕಾ ಇಂ(ವಿ) | ಮದ್ದೂರು ನಗರ ಉಪವಿಭಾಗ |
| 4 | ಶ್ರೀ ಎಸ್.ಶ್ರೀಕಾಂತ್ | ಸ ಕಾ ಇಂ(ವಿ) | ಮದ್ದೂರು ಗ್ರಾಮಾಂತರ ಉಪವಿಭಾಗ |
| 5 | ಶ್ರೀ ನಾಗರಾಜು | ಪ್ರಭಾರ ಲೆಕ್ಕಾಧಿಕಾರಿ | ಮದ್ದೂರು ವಿಭಾಗ |
| 6 | ಕು.ಆರ್. ರಾಖಿ | ಸಹಾಯಕ ಲೆಕ್ಕಾಧಿಕಾರಿ | ಮದ್ದೂರು ನಗರ ಉಪವಿಭಾಗ |
| 7 | ಶ್ರೀ ಹೆಚ್,ಎಂ.ಮಹೇಶ್ ಕುಮಾರ್ | ಹಿರಿಯ ಸಹಾಯಕ | ಮದ್ದೂರು ಉಪವಿಭಾಗ-1 |
| 8 | ಶ್ರೀ ಹೆಚ್.ಸಿ.ರಾಮಚಂದ್ರ | ಸ ಇಂ(ವಿ) | ಪಟ್ಟಣ ಶಾಖೆ, ನಗರ ಉಪವಿಭಾಗ ಮದ್ದೂರು |
| 9 | ಶ್ರೀ ಮೊಹಮ್ಮದ್ ಸಲ್ಲಾವುದ್ದೀನ್ ಖಾನ್ | ಸ ಇಂ(ವಿ) | ಕಾ & ಪಾ ಘಟಕ-1, ನಗರ ಉಪವಿಭಾಗ ಮದ್ದೂರು |
| 11 | ಶ್ರೀ ಆರ್.ಪ್ರಕಾಶ್ | ಪ್ರ ಕಿಇಂ(ವಿ) | ಗೆಜ್ಜಲಗೆರೆ ಶಾಖೆ, ನಗರ ಉಪವಿಭಾಗ ಮದ್ದೂರು |
| 12 | ಶ್ರೀ ಎಸ್.ರಾಜೇಶ್ | ಕಿ ಇಂ(ವಿ) | ಘಟಕ -2 ಕೆ.ಎಂ.ದೊಡ್ಡಿ ಶಾಖೆ |
| 13 | ಶ್ರೀಮತಿ ಬಿಂದು | ಕಿ ಇಂ(ವಿ) | ಘಟಕ -1 ಕೆ.ಎಂ.ದೊಡ್ಡಿ ಶಾಖೆ |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಯಿಸಿ ಉತ್ತರಿಸಲಾಯಿತು.

ಹಿಂದಿನ ಜನಸಂಪರ್ಕ ಸಭೆಯಲ್ಲಿ ಸಭಾ ನಡಾವಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ಸಾರ್ವಜನಿಕರಿಗೆ ಮಾಹಿ[illegible] ನೀಡಲಾಯಿತು.

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು -ಶ್ರೀ ಪ್ರಕಾಶ್ ಎನ್.ವಿ.,ನಿಡಗಟ್ಟ 9742934516 | |
| 1 | ವಿದ್ಯುತ್ ಕಂಬಗಳನ್ನು ಅಳವಡಿಸಿ ಗೃಹಬಳಕೆಗೆ ವಿದ್ಯುತ್ ಸಂಪರ್ಕ ನೀಡಲು ಅರ್ಜಿ ಸಲ್ಲಿಸಿ ನೋಂದಣಿ ಶುಲ್ಕ ಪಾವತಿಸಿದ್ದು ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ ಎಂದು ಮನವಿ ಮಾಡಿದರು. | ಇದಕ್ಕೆ ಪ್ರತಿಕ್ರಿಯಿಸಿ, ಸಂಪರ್ಕ ಪಡೆಯಲು ನೋಂದಾಯಿಸಿರುವ ಅರ್ಜಿ ಶುಲ್ಕವನ್ನು ಪಾವತಿಸಿರುವ ರಶೀದಿಯನ್ನು ನೀಡಲು ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು. ಅಥವಾ ಮತ್ತೊಮ್ಮೆ ಅರ್ಜಿ ಸಲ್ಲಿಸಿ ನಿಯಮಾನುಸಾರ ದಾಖಲಾತಿಗಳನ್ನು ಒದಗಿಸಲು ಸೂಚಿಸಲಾಯಿತು. |
| | ಗ್ರಾಹಕರು- ಶ್ರೀ ಯಶ್ವಂತ್, ಮದ್ದೂರು 9880405486 | |
| 2 | 2013 ರಲ್ಲಿ ಕಬ್ಬು ಸುಟ್ಟು ಹೋಗಿರುವ ನಷ್ಟದ ಬಗ್ಗೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದು, ಈವರೆಗೆ ಪರಿಹಾರ ನೀಡಲಾಗಿರುವುದಿಲ್ಲ, ಕಳೆದ ಜನಸಂಪರ್ಕ ಸಭೆಯಲ್ಲಿ ಸಹ ಈ ವಿಷಯವನ್ನು ಚರ್ಚಿಸಲಾಗಿತ್ತು ಎಂದು ದೂರಿದರು | **ಈ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯ ಇಂಜಿನಿಯರ್(ವಿ) ಕಚೇರಿಯನ್ನು ಸಂಪರ್ಕಿಸಿ ಆದೇಶ ಪತ್ರ ಪಡೆದು ಪರಿಹಾರದ ಚೆಕ್ ಅನ್ನು ಸಭೆಯಲ್ಲಿ ಗ್ರಾಹಕರಿಗೆ ವಿತರಿಸಲಾಯಿತು.** |
| | ಗ್ರಾಹಕರು- ಸಂತೋಷ್ ಕುಮಾರ್ ಲೀಲಾವತಿ ಬಡಾವಣೆ, ಮದ್ದೂರು 7899947678 | |
| 3 | ಲೀಲಾವತಿ ಬಡಾವಣೆಯಲ್ಲಿ ಕೆಲವು ಮನೆಗಳಿಗೆ ಮಾತ್ರ ವಿದ್ಯುತ್ ನಿರಂತರವಾಗಿ ಸರಬರಾಜು ಆಗುತ್ತಿಲ್ಲ ಈ ಸಂಬಂಧ ತಮ್ಮ ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಸಹ ಸಮಸ್ಯೆ ಬಗೆಹರಿಸಿರುವುದಿಲ್ಲ & ಲೋವೋಲ್ಟೇಜ್ ಸಮಸ್ಯೆ ಇದ್ದು ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಿ ಕೊಟ್ಟು ಸಮಸ್ಯೆ ಬಗೆಹರಿಸಬೇಕೆಂದು ಮನವಿ ಮಾಡಿದರು. ಪಟ್ಟಣ ವ್ಯಾಪ್ತಿಯುಲ್ಲಿ ಕಬ್ಬಿಣದ ಕಂಬಗಳಿದ್ದು ಬದಲಿಸಲು ಕೋರಿದರು. | ಇದಕ್ಕೆ ಸಕಾನಿಇಂ(ವಿ) ರವರು ಪ್ರತಿಕ್ರಿಯಿಸಿ, ಪ್ರಸಕ್ತ ಪಟ್ಟಣ ವ್ಯಾಪ್ತಿಯಲ್ಲಿ ಐ.ಪಿ.ಡಿ.ಎಸ್. ಯೋಜನೆಯಡಿ ಕಾಮಗಾರಿ ನಡೆಯುತ್ತಿದ್ದು, ಸದರಿ ಯೋಜನೆಯಡಿ ಅಗತ್ಯವಿರುವ ಕಡೆಯಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಸಿ ಉತ್ತಮ ಗುಣಮಟ್ಟದ ನಿರಂತರ ವಿದ್ಯುತ್ ಸರಬರಾಜು ಆಗುವಂತೆ ಮಾಡುವುದು, ಕಬ್ಬಿಣದ ಕಂಬ ಬದಲಾಯಿಸುವುದು ಹಾಗೂ ಕಾಪರ್ ಕಂಡಕ್ಟರ್‌ಗಳನ್ನು ಬದಲಾಯಿಸುವ ಕಾರ್ಯ ಪ್ರಗತಿಯಲ್ಲಿದ್ದು ಶೀಘ್ರದಲ್ಲಿ ಸಮಸ್ಯೆ ಪರಿಹಾರವಾಗುತ್ತದೆ ಎಂದು ತಿಳಿಸಿದರು |
| | ಗ್ರಾಹಕರು- ಶ್ರೀ ಬೋರೇಗೌಡ. ಕೆ.ಎಂ.ದೊಡ್ಡಿ 9964149713 | |
| 4 | ಹಳೆ ಅಂಗಡಿ ಮಳಿಗೆಗಳಿದ್ದು ಬಿಲ್ಡಿಂಗ್ ತೆರವುಗೊಳಿಸಿ ಮಾಪಕಗಳನ್ನು ಹಿಂದಿರುಗಿಸಲಾಗಿರುತ್ತದೆ. ಪ್ರಸಕ್ತ ಹೊಸ ಕಟ್ಟಡ ನಿರ್ಮಾಣಮಾಡಿ ವಿದ್ಯುತ್ ಸಂಪರ್ಕ ಕೋರಿದರು | ಈ ಸಂಬಂಧ ಉತ್ತರಿಸಿ, ಹೊಸ ಕಟ್ಟಡಕ್ಕೆ ನಿಯಮಾನುಸಾರ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಲು ತಿಳಿಸಲಾಯಿತು, ಅಗತ್ಯ ಪರಿವರ್ತಕವನ್ನು ಅಳವಡಿಸುವ ಸ್ಥಳವನ್ನು ತಾಂತ್ರಿಕವಾಗಿ ನಿರ್ಧರಿಸಲಾಗುವುದು ಎಂದು ತಿಳಿಸಲಾಯಿತು. |
| | ಗ್ರಾಹಕರು- ಶ್ರೀ ರಾಜು, ತೊರೆಬೊಮ್ಮನಹಳ್ಳಿ 9164008153 | |
| 5 | 2016 ನೇ ಸಾಲಿನಲ್ಲಿ RUIP ಯೋಜನೆಯಡಿ ಮೊತ್ತ ಪಾವತಿಸಿದ್ದು ಈವರೆವಿಗೂ ಸಂಪರ್ಕ ಕಲ್ಪಿಸಿರುವುದಿಲ್ಲ ಎಂದು ತಿಳಿಸಿದರು. | ಈ ಸಂಬಂಧ ಪ್ರತಿಕ್ರಿಯಿಸಿ, ಅಂದಾಜು ಪಟ್ಟಿ ತಯಾರಿಸಿ ವಿಭಾಗ ಕಚೇರಿಗೆ ಸಲ್ಲಿಸಲಾಗಿದ್ದು ಸಮಸ್ಯೆ ಪರಿಹರಿಸಿ ಕೊಡುವುದಾಗಿ ತಿಳಿಸಲಾಯಿತು. |
| | ಗ್ರಾಹಕರು- ಶ್ರೀ ಮಲ್ಲಯ್ಯ, ಹುಲಿಗೆರೆಪುರ | |
| 6 | RUIPಯೋಜನೆಯಡಿ ಮೊತ್ತ ಪಾವತಿಸಿ 25 ಕೆವಿಎ ಪರಿವರ್ತಕ ಅಳವಡಿಸಲಾಗಿರುತ್ತದೆ. ಆದರೆ ಪದೇ ಪದೇ ವಿಫಲಗೊಳ್ಳುತ್ತಿದ್ದು ಹೆಚ್ಚುವರಿ ಭಾರದ ಪರಿವರ್ತಕ ಅಳವಡಿಸಲು ಸೂಚಿಸಿದರು, ಈ ಟಿ.ಸಿ.ಮೇಲೆ ಬೇರೆ ರೈತರು ಸಂಪರ್ಕ ಹಾಕುತ್ತಿದ್ದಾರೆ ಎಂದು ತಿಳಿಸಿದರು | ಇದಕ್ಕೆ ಪ್ರತಿಕ್ರಿಯಿಸಿ, ಅನಧಿಕೃತವಾದ ಸಂಪರ್ಕವನ್ನು ತೆರವುಗೊಳಿಸಲು ತಾವು ಸಹಕರಿಸಬೇಕು ಹಾಗು 63 ಕೆವಿಎ ವಿಸ್ತರಿಸಿಕೊಡಲಾಗುವುದು ಎಂದು ತಿಳಿಸಲಾಯಿತು. |

| ಕ್ರ.ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು- ಶ್ರೀ ಬಿ.ಟಿ.ನೀಲಕಂಠೇಗೌಡ, ಟ.ಬಿ.ಹಳ್ಳಿ 9741935268 | |
| 7 | ಐ.ಪಿ. ಸ್ಥಾವರಕ್ಕೆ 100 ಕೆವಿಎ ಪರಿವರ್ತಕ ಅಳವಡಿಸಿದ್ದು, ಪದೇ ಪದೇ ಸುಟ್ಟು ಹೋಗುತ್ತಿರುವ್ಯದರಿಂದ, ಹೆಚ್ಚುವರಿಯಾಗಿ ಪರಿವರ್ತಕ ಅಳವಡಿಸಲು ಕೋರಿದರು & ಕುಡಿಯುವ ನೀರು ಸರಬರಾಜು ಸ್ಥಾವರಕ್ಕೆ ಪ್ರತ್ಯೇಕವಾಗಿ ಪರಿವರ್ತಕ ಅಳವಡಿಸಿಕೊಡಲು ಮನವಿ ಮಾಡಿದರು. | ಇದಕ್ಕೆ ಸಕಾನಿಇಂ(ವಿ) ರವರು ಪ್ರತಿಕ್ರಿಯಿಸಿ, 100 ಕೆ.ವಿ.ಎ ಪರಿವರ್ತಕದ ಮೇಲೆ ಅಗತ್ಯಕ್ಕಿಂತ ಹೆಚ್ಚು ಗ್ರಾಹಕರು ಸಂಪರ್ಕ ಕಲ್ಪಸಿಕೊಂಡಿರುವುದರಿಂದ ಪದೇ ಪದೇ ಸುಟ್ಟು ಹೋಗುತ್ತಿದ್ದು, RUIP ಯೋಜನೆಯಡಿ ಮೊತ್ತ ಪಾವತಿಸಿ ಮೂಲ ಸೌಕರ್ಯ ಪಡೆಯದೆ ಈ ಪರಿವರ್ತಕದಿಂದ ಸಂಪರ್ಕ ಕಲ್ಪಿಸಿಕೊಂಡಿರುವವರು ರಶೀದಿಗಳನ್ನು ನೀಡಿದರೆ ಅಂದಾಜು ಪಟ್ಟಿ ತಯಾರಿಸಿ ಹೆಚ್ಚುವರಿ ಪರಿವರ್ತಕ ಅಳವಡಿಸಲಾಗುವುದು ಎಂದು ತಿಳಿಸಿದರು. |
| | ಗ್ರಾಹಕರು - ಶ್ರೀ ನಿಂಗರಾಜು, ಅರೆಚಾಕನಹಳ್ಳಿ 8296650973 | |
| 8 | RUIP ಯೋಜನೆಯಡಿ 2017 ರಲ್ಲಿ ಮೊತ್ತ ಪಾವತಿಸಿದ್ದು ಕಾಮಗಾರಿ ನಿರ್ಮಿಸಿಕೊಡಲು ಕೋರಿದರು | ಈ ಸಂಬಂಧ DPR ಸಲ್ಲಿಸಿ, 2017-18 ರ DPR ಅನ್ನು ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಅನುಮೋದನೆ ದೊರೆತು ಅನುದಾನ ಬಿಡುಗಡೆಯಾದ ನಂತರ ಕಾಮಗಾರಿ ಮಾಡಿಕೊಡಲಾಗುವುದು ಎಂದು ತಿಳಿಸಲಾಯಿತು |
| | ಗ್ರಾಹಕರು - ಶ್ರೀಮತಿ ಪ್ರಿಯಾಂಕ, ಗೊರವನಹಳ್ಳಿ ರಸ್ತೆ ಮದ್ದೂರು | |
| 9 | 1.ಮನೆ ಮುಂದೆ ಕಂಬ ಬಾಗಿದ್ದು, ಟಿ.ಸಿ.ಯು ಇರುವುದರಿಂದ ಅಪಘಾತವಾಗುವ ಸಂಭವವಿರುತ್ತದೆ, ಗಾಳಿ ಮಳೆಯಿಂದಾಗಿ ಬಿದ್ದರೆ ತುಂಬಾ ಅನಾಹುತವಾಗುತ್ತದೆ ಎಂದು ತಿಳಿಸಿದರು<br>2. ನಳಂದ ಶಾಲೆ ಹತ್ತಿರ ಗ್ರೌಂಡಿಂಗ್ ತಂತಿಯನ್ನು ಚರಂಡಿಗೆ ಬಿಟಿದ್ದು ಪದೇ ಪದೇ ಶಾಕ್ ಆಗುವ ಸಂಭವವಿದೆ, ಸ್ಥಳದಲ್ಲಿ ಶಾಲಾ ಮಕ್ಕಳು ಓಡಾಡುವುದರಿಂದ ಅನಾಹುತ ಸಂಭವಿಸುವ ಮೊದಲೆ ಕ್ರಮ ಕೈಗೊಳ್ಳಲು ಕೋರಿದರು. | 1. ಇದಕ್ಕೆ ಸಕಾನಿಇಂ(ವಿ) ರವರುಪ್ರತಿಕ್ರಿಯಿಸಿ, ಪ್ರಸಕ್ತ ಐ.ಪಿ.ಡಿ.ಎಸ್. ಕಾಮಗಾರಿ ಯೋಜನೆಯಡಿ ಕೂಡಲೇ ಸ್ಥಳಾಂತರಿಸಿಕೊಡಲು ಸೂಚಿಸಲಾಯಿತು.<br>2.ಇದಕ್ಕೆ ಶಾಖಾಧಿಕಾರಿರವರು ಪ್ರತಿಕ್ರಿಯಿಸಿ ಕೂಡಲೇ ಸ್ಥಳ ಪರಿಶೀಲಿಸಿ ಸರಿಪಡಿಸಿಕೊಡಲಾಗುವುದು ಎಂದು ತಿಳಿಸಲಾಯಿತು |
| | ಗ್ರಾಹಕರು - ಶ್ರೀ ಲಕ್ಷ್ಮಿ ಜನಾರ್ಧನ, ವಳಗೆರೆಹಳ್ಳಿ 9845964733 | |
| 10 | RUIP ಯೋಜನೆಯಡಿ 2018 ರಲ್ಲಿ ಮೊತ್ತ ಪಾವತಿಸಿದ್ದು, ಪರಿವರ್ತಕ ಅಳವಡಿಸಿ ಸಂಪರ್ಕ ಕಲ್ಪಿಸಲು ಕೋರಲಾಯಿತು. ಆದರೆ 2013 ನೇ ಸಾಲಿನಲ್ಲಿ ಪಾವತಿಸಿರುವವರ ಜೊತೆಗೆ ನೀಡಲಾಗಿದೆ ಎಂದು ಕೋರಿದರು | ಈ ಸಂಬಂಧ ಜೇಷ್ಟತೆ ಆಧಾರದಲ್ಲಿ ಕಾಮಗಾರಿ ಮಾಡಿಕೊಡಲಾಗುವುದು ಎಂದು ತಿಳಿಸಲಾಯಿತು. |
| | ಗ್ರಾಹಕರು - ಶ್ರೀ ಶಿವಣ್ಣ ಎಸ್.ಐ.ಹೊನ್ನಲಗೆರೆ 9980773869 | |
| 11 | SCP ಯೋಜನೆಯಡಿ 2 ವರ್ಷಗಳ ಹಿಂದೆ ಕಾವೇರಿ ನೀರಾವರಿ ನಿಗಮದಿಂದ ಕೊಳವೆ ಬಾವಿ ತೋಡಿಸಿದ್ದು, ಈವರೆವಿಗೂ ಕಾಮಗಾರಿ ನಿರ್ವಹಿಸಿರುವುದಿಲ್ಲ ಎಂದು ಮನವಿ ಸಲ್ಲಿಸಿದರು. | ಈ ಸಂಬಂಧ ಕಾವೇರಿ ನೀರಾವರಿ ನಿಗಮದವರು ಅರ್ಜಿ ನೋಂದಾಯಿಸಿದ ನಂತರ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆ ಪಡೆದು ನಂತರ ಇಂಟಿಮೇಷನ್ ನೀಡಲಾಗುವುದು. ಸದರಿ ಮೊತ್ತವನ್ನು ಸಂಬಂಧಿಸಿದ ಇಲಾಖೆಯಿಂದ ಪಾವತಿಯಾದ ನಂತರ ಸ್ವಂತ ಕಾಮಗಾರಿ ಮಾಡಿಕೊಳ್ಳಬೇಕು ಎಂದು ತಿಳಿಸಲಾಯಿತು, ಈ ಸಂಬಂಧ ಕಾವೇರಿ ನೀರಾವರಿ ನಿಗಮದ ಕಚೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಲು ಸೂಚಿಸಲಾಯಿತು |

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| ಗ್ರಾಹಕರು -ಚೌಡಯ್ಯ ಮಾಲಗಾರನಹಳ್ಳಿ 9980362758 | | |
| 12 | ಆರ್.ಟಿ.ಸಿ. ಜಮೀನಿನಲ್ಲಿರುವ ಮನೆಗೆ ನಿರಂತರ ಜ್ಯೋತಿ ಮಾರ್ಗದಿಂದ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿ ಐ.ಪಿ.ಫೀಡರ್‌ನಿಂದ ಮಾತ್ರ ಸಂಪರ್ಕ ಕಲ್ಪಿಸಲು ಅವಕಾಶವಿದ್ದು, ನಿರಂತರ ಜ್ಯೋತಿ ಮಾರ್ಗದಿಂದ ಸಂಪರ್ಕ ನೀಡಲು ಅವಕಾಶವಿರುವುದಿಲ್ಲ. ಗ್ರಾಮ ಠಾಣಾ ವ್ಯಾಪ್ತಿಗೆ ಬಂದರೆ ಮಾತ್ರ ಸಂಪರ್ಕ ನಿಯಾಮನುಸಾರ ಕಲ್ಪಿಸಲಾಗುವುದು, ನಿಯಮಾನುಸಾರ ಹಿಂಬರಹ ನೀಡಲು ಸೂಚಿಸಲಾಯಿತು ಹಾಗು ಸ್ವಂತ ಖರ್ಚಿನಲ್ಲಿ ಕಾಮಗಾರಿ ನಿರ್ಮಿಸಿಕೊಳ್ಳಲು ತಿಳಿಸಲಾಯಿತು |
| ಗ್ರಾಹಕರು - ಶ್ರೀ ಮೋಹನ್, ನಾಗಣ್ಣ, ಮದ್ದೂರು | | |
| 13 | ನಂಜಪ್ಪ ಕಲ್ಯಾಣ ಮಂಟಪದ ಪಕ್ಕ 15 ಎಕರೆ ಜಮೀನಿದ್ದು, ಕೊಳವೆ ಬಾವಿಗೆ ಸೂರ್ಯರೈತ ಯೋಜನೆಯಡಿ ಸಂಪರ್ಕ ಕಲ್ಪಿಸಿಕೊಡಲು ಕೊರಿದ್ದರು, ಇಬ್ಬರು ಅಥವಾ ಮೂವರು ಗ್ರಾಹಕರಿಗೆ ಸೇರಿ ಪರಿವರ್ತಕ ಹಾಕಿಸಿಕೊಡಲು ಕೋರಿದರು | ತುರ್ತು, ಕಾಮಗಾರಿಯಡಿ ಸ್ವಂತ ಕಾಮಗಾರಿಯನ್ನು ನಿರ್ಮಿಸಿಕೊಳ್ಳಬಹುದಾಗಿದ್ದು ಪರಿವರ್ತಕವನ್ನು ನಿಗಮದ ವತಿಯಿಂದ ನೀಡಲಾಗುವುದು ಎಂದು ತಿಳಿಸಲಾಯಿತು, ಈ ಸಂಬಂಧ ಅರ್ಜಿ ಸಲ್ಲಿಸಲು ತಿಳಿಸಲಾಯಿತು. |
| ಗ್ರಾಹಕರು - ಶ್ರೀ ಅಕ್ತರ್ ಪಾಷ ಜಿ.ಎನ್.ಅಗರಬತ್ತಿ ಕಾರ್ಖಾನೆ, ಸೋಮನಹಳ್ಳಿ 988020159 | | |
| 14 | ಕೈಗಾರಿಕೆಗೆ ನಿರಂತರ ವಿದ್ಯುತ್ ಸರಬರಾಜು ಆಗುತ್ತಿಲ್ಲ ಅಡಚಣೆಗಳು ಹೆಚ್ಚಾಗುತ್ತಿದೆ ಎಂದು ದೂರಿದರು | ಇದಕ್ಕೆ ಪ್ರತಿಕ್ರಿಯಿಸಿ, ಪಟ್ಟಣದ ಎಲ್ಲಾ ಫೀಡರ್‌ಗಳ ವ್ಯಾಪ್ತಿಯಲ್ಲಿ ಐ.ಪಿ.ಡಿ.ಎಸ್. ಯೋಜನೆಯಡಿ ಎ.ಬಿ.ಕೇಬಲ್ ಮತ್ತು ಪರಿವರ್ತಕಗಳನ್ನು ಅಳವಡಿಸುತ್ತಿರುವ ಕಾಮಗಾರಿ ನಡೆಯುತ್ತಿರುವುದರಿಂದ ಒಂದೇ ಮಾರ್ಗದಲ್ಲಿ ಹಲವು ಫೀಡರ್‌ಗಳು ಹಾದು ಹೋಗಿದ್ದು ಅನಿವಾರ್ಯವಾಗಿ ಕಾಮಗಾರಿ ನಿರ್ವಹಿಸಲು ಮಾರ್ಗ ಮುಕ್ತತೆಯನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಈಗಾಗಲೇ ಪತ್ರಿಕ ಪ್ರಕಟಣೆ ನೀಡಿ ಕಾಮಗಾರಿ ಮುಗಿಯುವವರೆಗೆ ಅವಶ್ಯಕತೆಗನುಗುಣವಾಗಿ ವಿದ್ಯುತ್ ವ್ಯತ್ಯಾಯವಾಗುವ ಬಗ್ಗೆ ತಿಳಿಸಿದ್ದು ಕೈಗಾರಿಕ ಪ್ರದೇಶಕ್ಕೆ ವಿದ್ಯುತ್ ವ್ಯತ್ಯಾಯ ದಿನಂ ಪೂರ್ತಿ ಆಗುವ ದಿನಾಂಕದಂದು ಗ್ರಾಹಕರಿಗೆ ತಿಳಿಸಲಾಗುತ್ತಿರುತ್ತದೆ. ಪೂರ್ಣಗೊಂಡನಂತರ ನಿರಂತರ ಸರಬರಾಜು ಆಗುವುದು ಎಂದು ತಿಳಿಸಲಾಯಿತು. |
| ಗ್ರಾಹಕರು - ಶ್ರೀ ಬಸವರಾಜು ಅಜ್ಜಹಳ್ಳಿ | | |
| 15 | ಕೆಲವು ಕುಡಿಯುವ ನೀರು ಸ್ಥಾವರಗಳಲ್ಲಿ ಸುಟ್ಟು ಹೋಗಿರುವ ಟ.ಸಿ.ಗಳನ್ನು ಬದಲಾಯಿಸಲು ವಿಳಂಬವಾಗುತ್ತಿದ್ದು, ಶೀಘ್ರಗತಿಯಲ್ಲಿ ಬದಲಾಯಿಸಲು ಕೋರಿದರು. | ಈ ಸಂಬಂಧ ಕುಡಿಯುವ ನೀರು ಸ್ಥಾವರಗಳ ಸಂಪರ್ಕಕ್ಕೆ ಪ್ರತ್ಯೇಕ 25 ಕೆವಿಎ ಪರಿವರ್ತಕ ಅಳವಡಿಸಲು ಸೂಚಿಸಲಾಯಿತು. ಆದರೆ ಪಂಚಾಯ್ತಿಯಿಂದ ನಿಂತುಹೋಗಿರುವ ಬೋರ್‌ವೆಲ್‌ಗಳಿಗೆ ಸ್ಥಳಾಂತರಗೊಳಿಸಿದ್ದು, ಅನಧಿಕೃತವಾಗಿ ಬದಲಾಯಿಸಲು ಅವಕಾಶವಿರುವುದಿಲ್ಲ ಬದಲಾಗಿ ಅರ್ಜಿ ನೀಡಿದ್ದಲ್ಲಿ ಬದಲಾಯಿಸಲು ತಗಲುವ ವೆಚ್ಚವನ್ನು ಪಾವತಿಸಿದಲ್ಲಿ ಅಥವಾ ಕಾಮಗಾರಿ ಮುಗಿದ ಮೇಲೆ ವಿದ್ಯುತ್ ಬಿಲ್ ನಲ್ಲಿ ಸೇರಿಸಿ ಕಳುಹಿಸಲಾಗುವುದು ಎಂದು ತಿಳಿಸಲಾಯಿತು |

| ಕ್ರ.ಸಂಖ್ಯೆ | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರ ಸಲಹೆಗಳು |
|---|---|
| 1 | ದೂರುದಾರರು ಕೋರಿದ್ದಲ್ಲಿ ಸದರಿಯವರ ದೂರಿನ ವರದಿಯನ್ನು ಮಾತ್ರ ನೀಡಲು ಸೂಚಿಸಲಾಯಿತು. |
| 2 | ಯಿಂದ ಮತ್ತು ಗೆ ಪುಸ್ತಕ ನಮೂದುಗಳು ಹಾಗು ಪರಿಹಾರವಾದ ವಿವರ ಮತ್ತು ಯಾರಿಂದ ಯಾರಿಗೆ ಹಸ್ತಾಂತರವಾಗಿದೆ ಎನ್ನುವುದರ ಕುರಿತು ಮಾಹಿತಿ ಇರುವಂತೆ ನಮೂದಿಸಿ ಸಂಬಂಧಿಸಿದವರಿಂದ ಸಹಿ ಪಡೆಯಲು ಸೂಚಿಸಲಾಯಿತು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 1.30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ನಗರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಮು.ಕ